<u>ಅಸಲು ದಾವಾ ಸಂಖ್ಯೆಃ **- 37/2020**</u> ಪಿ.ಡಬ್ಲ್ಯೂ**:-1**

ದಿನಾಂಕಃ **18.09.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

4 ನೇ ಪ್ರತಿವಾದಿ ನನ್ನ ತಮ್ಮ. 5 ನೇ ಪ್ರತಿವಾದಿ ನನ್ನ ತಮ್ಮನ ಮಗಳು. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಶೇಖರಪ್ಪ ನಾವು ಒಟ್ಟು 5 ಜನ ಮಕ್ಕಳು ಅಂದರೆ ನಾನು, ತೀರ್ಥಲಿಂಗಪ್ಪ ಮತ್ತು ಪ್ರತಿವಾದಿ 2 ರಿಂದ 4. ನನ್ನ ಅಣ್ಣ ತೀರ್ಥಲಿಂಗಪ್ಪ ಮದುವೆಯಾಗದೇ ತೀರಿಕೊಂಡಿರುತ್ತಾರೆ. ನನಗೆ, ಪ್ರತಿವಾದಿ 2 ರಿಂದ 4 ರವರಿಗೆ ದಾವಾ ಆಸ್ತಿಗಳಲ್ಲಿ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿ. 5 ನೇ ಪ್ರತಿವಾದಿಯು 4 ನೇ ಪ್ರತಿವಾದಿಯ ಮಗಳಾಗಿದ್ದರಿಂದ 5 ನೇ ಪ್ರತಿವಾದಿಗೆ 4 ನೇ ಪ್ರತಿವಾದಿಗೆ ಭಾಗಾಂಶಕ್ಕೆ ಬಂದಂತಹ ಆಸ್ತಿಗಳಲ್ಲಿ ಭಾಗಾಂಶದ ಹಕ್ಕು ಇದೆ ಎಂದರೆ ಸರಿ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.